**B**

**SL. No. : YY**

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]

Total No. of Questions : 45 ]

**CCE RR**

**UN-REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 33-K** **Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 27. 03. 2019 ] [ Date : 27. 03. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 45 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೂರಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $8 \times 1 = 8$

1. ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?
2. ಸಾಧನೆಗೆ ಅವಶ್ಯಕವಾದುದು ಯಾವುದು ?
3. ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಯಾವುದು ?
4. ರಾಮನ್‌ರವರು ಯಾರನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿದ್ದರು ?
5. ಬನದ ಗೋಪಾಲ ಯಾರು ?
6. ನಿತ್ಯದಾಸೋಹ ಎಂದರೇನು ?
7. ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು ?
8. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $11 \times 2 = 22$

9. ಸಾಮಾನ್ಯವಾದ ಲೋಕವರ್ತನೆ ಯಾವುದು ?
10. ಕರ್ನಾಟಕದ ಕ್ರಿಕೆಟ್ ಆಟಗಾರರ ಹಿರಿಮೆ ಎಂತಹುದು ?
11. "ತಪ್ಪಾತರೀ ಸಾಹೇಬರ" ಎಂದು ಅಜ್ಜ ಹೇಳಿದ್ದು ಏಕೆ ?
12. "ಎಲ್ಲಿ ಹೋಗ್ಯಾವೊ ಗೆಳೆಯ ಆ ಕಾಲ" ಎಂಬ ಮಾತು ಲೇಖಕರಿಗೆ ನೆನಪಾಗಲು ಕಾರಣವೇನು ?
13. ರಾಮನ್‌ರು ಯಾರೊಬ್ಬರ ಶಿಫಾರಸ್ಸನ್ನು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ ಏಕೆ ?
14. ಕವಯಿತ್ರಿಗೆ ತನ್ನ ಇರುವಿಕೆಯ ಅರಿವಾಗುವುದು ಯಾವಾಗ ?
15. ಬಾಹುಬಲಿಯು ಬೆಟ್ಟದ ಮೇಲೆ ಬಂದು ನಿಲ್ಲಲು ಕಾರಣವೇನು ?
16. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?
17. ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?
18. ಲೇಖಕರು ಅನ್ನಪೂರ್ಣೆಗೆ ಹೇಳಿದ ಮಾತು ಕೇವಲ ಕೌನ್ಸಿಲಿಂಗ್ ಆಗಿತ್ತು. ಹೇಗೆ ?
19. ಸಾವಿತ್ರಿ ತೀರಾ ಮುಗ್ಧೆ ಹೇಗೆ ?

20. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕೊರಡ ಕೊನರಿಸಿ ..................................................

....................................................................

....................................................................

............................................ ಕಲರವಕೆ ಮತ್ತೇರಿದೆ.

***ಅಥವಾ***

ಯುಗದ ಹಿಂದಿನ ....................................................

....................................................................

....................................................................

................................................ ತುಂಬ ಸವಿಚೈತ್ರವು.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

21. ಕುವೆಂಪು

22. ಗದುಗಿನ ನಾರಣಪ್ಪ (ಕುಮಾರವ್ಯಾಸ)

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 2 × 3 = 6

23. ಅವರ ಜನಪ್ರಿಯತೆಗೆ ಬೇರೆ ಸಾಕ್ಷಿ ಬೇಡ.

24. ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು.

**ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು–ಹತ್ತು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

25. ಪಶ್ಚಿಮ ಘಟ್ಟಗಳ ಪತನ ಹೇಗಾಗುತ್ತಿದೆ ? ವಿವರಿಸಿ.

***ಅಥವಾ***

ಸಹ್ಯಾದ್ರಿ ಸಹನೆ ಕಳೆದುಕೊಳ್ಳಲು ಕಾರಣವೇನು ? ಅದರ ಪರಿಣಾಮವೇನು ? ವಿವರಿಸಿ.

26. 'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ಬರೆಯಿರಿ.

***ಅಥವಾ***

ಜೀವನ ಸಾರ್ಥಕ್ಯಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು 'ಗುರಿ' ಪದ್ಯವನ್ನಾಧರಿಸಿ ಬರೆಯಿರಿ.

## ವಿಭಾಗ – 'ಬಿ'

**(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

27. 'ರಾಜರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

    (ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

    (ಸಿ) ಯಣ್ ಸಂಧಿ (ಡಿ) ವೃದ್ಧಿ ಸಂಧಿ

28. ಏಕವಚನದಲ್ಲಿರುವ ನಾಮಪದವಿದು

    (ಎ) ಕವಿಗಳು (ಬಿ) ಪಾಲಕರು

    (ಸಿ) ಶಿಕ್ಷಕ (ಡಿ) ತಾಯಂದಿರು

29. 'ಕೆಂದಾವರೆ' ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ

    (ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ

    (ಸಿ) ದ್ವಂದ್ವ ಸಮಾಸ (ಡಿ) ದ್ವಿಗು ಸಮಾಸ

30. 'ಮನೆಯನ್ನು' ಪದದಲ್ಲಿರುವ ವಿಭಕ್ತಿ

    (ಎ) ತೃತೀಯಾ (ಬಿ) ಚತುರ್ಥಿ

    (ಸಿ) ಸಪ್ತಮಿ (ಡಿ) ದ್ವಿತೀಯಾ

31. 'ನೆರೆಹೊರೆ' ಪದ ಇದಕ್ಕೆ ಉದಾಹರಣೆ

    (ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

    (ಸಿ) ಜೋಡುನುಡಿ (ಡಿ) ನಾಣ್ನುಡಿ

32. ವರ್ತಮಾನ ಕಾಲದ 'ಕ್ರಿಯಾಪದ'ವಿದು

(ಎ) ಹೋಗುತ್ತಾಳೆ (ಬಿ) ಹೋಗುವಳು

(ಸಿ) ಹೋದಳು (ಡಿ) ಹೋಗಿಯಾಳು

33. 'ಐದು' ಮಾತ್ರೆಗಳಿಂದ ಕೂಡಿರುವ ಪದ

(ಎ) ನಗುತ (ಬಿ) ರಥವನು

(ಸಿ) ಸಾಲಲ್ಲಿ (ಡಿ) ಐರಾವತ

34. 'ಪತನ' – ಪದದ ಅರ್ಥ

(ಎ) ಅವನತಿ (ಬಿ) ಉನ್ನತಿ

(ಸಿ) ಅಭಿವೃದ್ಧಿ (ಡಿ) ಪ್ರಗತಿ

35. 'ಮುಖಚಂದ್ರ' ಇಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ದೃಷ್ಟಾಂತಾಲಂಕಾರ (ಡಿ) ಶ್ಲೇಷಾಲಂಕಾರ

36. ಸದ್ದು ಮಾಡದಿರು! ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ಪೂರ್ಣವಿರಾಮ

(ಸಿ) ಪ್ರಶ್ನಾರ್ಥಕ (ಡಿ) ಆಶ್ಚರ್ಯಸೂಚಕ

37. 'ಮೂರು' ಸಾಲಿನಿಂದ ಕೂಡಿರುವ ಪದ್ಯ

(ಎ) ತ್ರಿಪದಿ (ಬಿ) ದ್ವಿಪದಿ

(ಸಿ) ಚೌಪದಿ (ಡಿ) ಷಟ್ಪದಿ

38. 'ಜ್ಞಾನ' ಪದದ ವಿರುದ್ಧಾರ್ಥಕ ಪದ

(ಎ) ಸುಜ್ಞಾನ (ಬಿ) ವಿಜ್ಞಾನ

(ಸಿ) ಅಜ್ಞಾನ (ಡಿ) ಪರಿಜ್ಞಾನ

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಜಗತ್ತಿನಲ್ಲಿ ಶಕ್ತಿಗೆ ವ್ಯಾಪಕ ಪುರಸ್ಕಾರವಿದೆ ಶಾರೀರಿಕ. ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳು ಒಂದುಗೂಡಿದಾಗ ಶಕ್ತಿಶಾಲಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಕೇವಲ ಶಾರೀರಿಕ ಶಕ್ತಿಯೊಂದರಿಂದಲೇ ಪರಿಪೂರ್ಣತೆ ಅಸಾಧ್ಯ. ಸರ್ವತೋಮುಖ ಬೆಳವಣಿಗೆಯಿಂದ ವ್ಯಕ್ತಿತ್ವದ ಅಭಿವೃದ್ಧಿ ಸಾಧಿತವಾಗುತ್ತದೆ. ಪರಂಪರೆ, ಚರಿತ್ರೆ, ಸಂಸ್ಕೃತಿಯ ಅರಿವಿನೊಂದಿಗೆ ಸಚ್ಚಾರಿತ್ರ್ಯವನ್ನು ಅಳವಡಿಸಿಕೊಂಡಾಗ ಉದ್ದೇಶಿತ ಗುರಿಯನ್ನು ಪ್ರಾಮಾಣಿಕವಾಗಿ ಸಾಧಿಸಬಹುದು. ಮಹಾಭಾರತದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಶಕ್ತಿಶಾಲಿಯಾಗೆಂದು ಬೋಧಿಸಿದ. ಸ್ವಾಮಿ ವಿವೇಕಾನಂದರು ಸಿಂಹವಾಣಿಯಿಂದ ಯುವಜನತೆಯನ್ನು ಎಚ್ಚರಿಸಿದರು. ವೈಚಾರಿಕ, ನೈತಿಕ ಸಾಮರ್ಥ್ಯದಿಂದ ಜಗತ್ತನ್ನೇ ಗೆಲ್ಲಬಹುದೆಂದು ಸಾರಿದರು. ಅಜ್ಞಾನ, ಕೀಳರಿಮೆ, ರಾಗದ್ವೇಷಗಳ ಕೂಪದಿಂದ ಹೊರಬಂದು ಉದ್ದೇಶಿತ ಕಾರ್ಯದಲ್ಲಿ ನಿಷ್ಠೆ ಹೊಂದಿದಾಗ ಉಜ್ವಲ ಭವಿಷ್ಯ ರೂಪುಗೊಳ್ಳುತ್ತದೆ. ಆದಕ್ಕೆ ನಮ್ಮೆಲ್ಲರ ಮುಂದಿರುವ ಅಸ್ತ್ರವೇ ಸಶಕ್ತಿ ಮತ್ತು ಆತ್ಮಸ್ಥೈರ್ಯ. ಒಳ್ಳೆಯ ಆಲೋಚನೆ ಮತ್ತು ಕ್ರಿಯಾಶೀಲತೆಯಿಂದ ಶಕ್ತಿಯನ್ನು ಪಡೆಯಬಹುದು.

*ಪ್ರಶ್ನೆಗಳು :*

39. ಶಕ್ತಿಶಾಲಿ ವ್ಯಕ್ತಿತ್ವ ಯಾವಾಗ ರೂಪುಗೊಳ್ಳುತ್ತದೆ ?

40. ಯುವಜನತೆ ಯಾವುದರಿಂದ ಹೊರ ಬರಬೇಕು ?

41. ಶ್ರೀಕೃಷ್ಣ ಅರ್ಜುನನಿಗೆ ಏನೆಂದು ಬೋಧಿಸಿದನು ?

42. ಶಕ್ತಿಯನ್ನು ಹೇಗೆ ಪಡೆಯಬಹುದು ?

43. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

   * ಕೈಕೆಸರಾದರೆ ಬಾಯಿ ಮೊಸರು
   * ತಾ ಕಳ್ಳ; ಪರರ ನಂಬ
   * ಹಾಸಿಗೆ ಇದ್ದಷ್ಟೇ ಕಾಲು ಚಾಚು

44. ನಿಮ್ಮನ್ನು ಕೋಲಾರದ ಕುವೆಂಪು ನಗರದ 'ಅನಿತ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಬೆಂಗಳೂರಿನ ಶಿವಾಜಿನಗರದಲ್ಲಿರುವ 'ವೆಂಕಟೇಶ' ಎಂಬ ಹೆಸರಿನ ತಂದೆಯವರಿಗೊಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ದಾವಣಗೆರೆಯ ಗ್ರಾಮಾಂತರ ಪ್ರೌಢಶಾಲೆಯ 'ಸುರೇಶ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ.

45. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಜನತೆಯ ಪಾತ್ರ
* ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
* ಕ್ರೀಡೆಗಳ ಮಹತ್ವ